# ಶರಣ ಸಾಹಿತ್ಯದಲ್ಲಿ ಮಹಿಳಾಪರ ನಿಲುವುಗಳು

**LOHIT. P**
Assistant Professor,
Department of Kannada,
Akshara Institute of Management Studies,
Akshara Nagara, Channamumbapura, Savalanga Road,
Shivamogga.

ಹನ್ನೆರಡನೇ ಶತಮಾನದಲ್ಲಿ ಬೆಳೆದು ಬಂದ ವಚನ ಸಾಹಿತ್ಯವು ಸಮಾಜದಲ್ಲಿನ ಅಂಕುಡೊಂಕುಗಳನ್ನು, ನೋವು ನಲಿವುಗಳನ್ನು, ಮೂಢನಂಬಿಕೆಗಳನ್ನು, ಸಂಪ್ರದಾಯ ಹಾಗೂ ವ್ರತಾಚರಣೆ, ಜಾತಿ,ವರ್ಗ ಹೀಗೆ ಅನೇಕ ವಿಷಯಗಳನ್ನು ಒಳಗೊಂಡಿದೆ. ಶಿವಶರಣರು ತಮ್ಮ ಜೀವನದಲ್ಲಿ ಕಂಡು ಅನುಭವಿಸಿದ ಅನುಭವಗಳ ಅಭಿವ್ಯಕ್ತಗಳಾಗಿವೆ. ಬಹುತೇಕ ವಚನಗಳು ಅವರ ಜೀವನಕ್ಕೆ ಬರೆದ ಭಾಷ್ಯಗಳಂತೆಯೂ ರಚನೆಗೊಂಡಿವೆ. ಬಸವಣ್ಣ, ಅಲ್ಲಮ ಪ್ರಭು, ಸರ್ವಜ್ಞ ಅಂಬಿಗರ ಚೌಡಯ್ಯ, ಅಕ್ಕಮಹಾದೇವಿ ಮುಂತಾದ ವಚನಕಾರರು ಸಾಮಾಜಿಕ ಕಳಕಳಿಯ ತಮ್ಮ ವಿಚಾರಗಳನ್ನು ವಚನಗಳಲ್ಲಿ ವ್ಯಕ್ತಪಡಿಸಿದ್ದಾರೆ. ಸೂಳೆ ಸಂಕವ್ವೆ, ಅಮುಗೆ ರಾಯಮ್ಮ, ಆಯ್ದಕ್ಕಿ ಲಕ್ಕಮ್ಮ, ಸತ್ಯಕ್ಕ ಮುಂತಾದ ವಚನಕಾತರ್ಿಯರು ತಮ್ಮ ಜೀವನದ ಆತ್ಮಕಥೆಯನ್ನು ಬರೆದುಕೊಂಡ ರೀತಿಯಲ್ಲಿ ವಚನಗಳನ್ನು ರಚಿಸಿದ್ದಾರೆ. ಸಾಮಾಜಿಕವಾಗಿ ಮಹಿಳೆಗಿದ್ದ ಗೌರವಸ್ಥಾನ ಹಾಗೂ ಪುರುಷ ಪ್ರಭುತ್ವದಲ್ಲಿ ನಲುಗಿದ ಆಕೆಯ ಸ್ಥಿತಿಯನ್ನು ಶರಣರು ಸಾಹಿತ್ಯದ ಮೂಲಕ ಮಹಿಳಾ ಸ್ವಾತಂತ್ರ್ಯ ಸಮಾನತೆ, ಸಾಮಾಜಿಕ ಸ್ಥಾನದ ಸಂಗತಿಗಳನ್ನು ನಾನಾ ಬಗೆಯ ಉಪಮೆಯಗಳನ್ನು ಬಳಸಿ ಅಭಿವ್ಯಕ್ತಿಸಿದ್ದಾರೆ. ಇವುಗಳನ್ನು ಆಧರಿಸಿ ಶಿವಶರಣರು ಹೊಂದಿದ ಮಹಿಳಾಪರ ನಿಲುವುಗಳನ್ನು ಒಂದೆಡೆ ಸಂಗ್ರಹಿಸಿ ಚಚರ್ಿಸುವ ಪ್ರಮುಖ ಉದ್ದೇಶ ಈ ಲೇಖನದ್ದಾಗಿದೆ.

ಜಾತಿಬೇಧ, ವರ್ಗಬೇಧ, ವರ್ಣಬೇಧ, ಹಾಗೂ ಲಿಂಗಬೇಧವನ್ನು ಒಪ್ಪದ ಶರಣರು ಸ್ತ್ರೀ ಪುರುಷ ಸಮಾನತೆಯ ಘೋಷಣೆಯಲ್ಲಿ ತಮ್ಮ ಧ್ವನಿಯನ್ನು ಕೂಡಿಸಿ, ಅದನ್ನು ಅರ್ಥಪೂರ್ಣವಾಗಿ ಆಚರಣೆಯಲ್ಲಿ ತಂದು ಸಾರ್ಥಕ ಪಡಿಸಿಕೊಂಡಿದ್ದಾರೆ, 'ನಾಮದಲ್ಲಿ ಹೆಂಗೂಸೆಂಬ ಹೆಸರಾದಡೇನು ಭಾವಿಸಲು ಗಂಡುರೂಪನೋಡಾ' ಎಂದು ಅಕ್ಕಮಹಾದೇವಿಯು ವ್ಯಕ್ತಪಡಿಸಿದ್ದಾರೆ. ಶರಣ ಧರ್ಮದಲ್ಲಿ ನೈತಿಕ ನಡುವಳಿಕೆಗೆ ಪ್ರಥಮ ಪ್ರಾಶಸ್ತ್ಯ ಶೀಲ, ಚಾರಿತ್ರೆ, ವ್ಯಕ್ತಿಯ ಜೀವರತ್ನಗಳಿದಂತೆ ಎಂದು ನಂಬಿ, ನೀತಿಯ ನೆಲೆಗಟ್ಟಿನ ಮೇಲೆ ಸುಂದರ ಸಮಾಜಸೌಧ ನಿಮರ್ಿಸಲು ಉದ್ದೇಶಿಸಿದ ಶರಣರು ಅದನ್ನು ತಮ್ಮ ಜೀವನದ ಮೌಲ್ಯವನ್ನಾಗಿ ಸ್ವೀಕರಿಸಿದರು. ಅವರ ಆ ನೀತಿಸಂಹಿತೆಯಲ್ಲಿ ಪುರುಷರು ಸ್ತ್ರೀಯರನ್ನು ಕಾಣಬೇಕಾದ ರೀತಿ ವಿಶಿಷ್ಟವಾದುದು. ಸ್ತ್ರೀಯರು ಬಗೆಗಿದ್ದ ಪುರುಷನ ರೋಷಪೂರ್ಣ ದೃಷ್ಟಿಯನ್ನು ಬದಲಿಸಲು ಪ್ರಯತ್ನಿಸಿದರು. ಚಾತುವರ್ಣ ವ್ಯವಸ್ಥೆಯಲ್ಲಿ ಮಹಿಳೆಗೆ ಯಾವ ಸ್ಥಾನವೂ ಇಲ್ಲ ಮೋಕ್ಷವೂ ಇಲ್ಲ ಎನ್ನುತ್ತಿದ್ದ ಕಾಲವನ್ನು ಮೀರಿ ಸ್ತ್ರೀ ಪುರುಷರು ಸಮಾನರು ಎಂಬುದನ್ನು

ಮೊಲೆ ಮುಡಿ ಬಂದರೆ ಹೆಣ್ಣೆಂಬರು

ಗಡ್ಡ ಮೀಸೆ ಬಂದರೆ ಗಂಡೆಂಬರು
ನಡುವೆ ಸುಳಿವ ಆತ್ಮ ಹೆಣ್ಣೂ ಅಲ್ಲ, ಗಂಡೂ ಅಲ್ಲ.

ಎಂದು ಆತ್ಮದ ಸಮಾನತೆಯಲ್ಲಿ ಜೀವನದ ಘನತೆಯನ್ನು ಗೌರವಿಸಿ ಜೇಡರ ದಾಸೀಮಯ್ಯ ಹೆಣ್ಣು ಗಂಡುಗಳೆಂಬ ಬೇಧವನ್ನು ಒಡೆದು ಹಾಗಿದ್ದಾನೆ. ಇದೇ ವಿಚಾರವನ್ನು ಮುಂದುವರೆಸಿದ ಸತ್ಯಕ್ಕೆ .....

ಮೊಲೆ ಮುಡಿಯದ್ದುದೆ
ಹೆಂಣ್ಣೆಂದು ಪ್ರಮಾಣಿಸಲಿಲ್ಲ
ಕಾಸೆ ಮೀಸೆ ಕಠಾರವಿದ್ದುದೆ
ಗಂಡೆಂದು ಪ್ರಮಾಣಿಸಲಿಲ್ಲ
ಅದು ಜಗದ ಮಾಯೆ ಬಲ್ಲವರ ನೀತಿಯಲ್ಲ,
ಏತರ ಹೆಣ್ಣಾದರು ಮಧುರವೇ ಕಾರಣ,
ಅಂದವಿಲ್ಲದ ಕುಸುಮಕ್ಕೆ ವಾಸನೆಯೇ ಕಾರಣ. ಎಂದು ಹೇಳುತ್ತಾ

ನಿಜವಾದ ಬೇಧವಿರುವುದು ರೂಪದಿಂದಲ್ಲ ಗುಣದಿಂದ ಎಂಬುದಕ್ಕೆ ಹೆಣ್ಣನ್ನು ಕುಸುಮಕ್ಕೆ ದೃಷ್ಟಾಂತೀಕರಿಸಿದ್ದಾಳೆ. ವಚನ ಧರ್ಮದಲ್ಲಿ ಮಹಿಳಾ ಸಂವೇದನೆಯ ಆಶಯಗಳನ್ನು ಕೇವಲ ನುಡಿಯಲ್ಲಿರಲಿಲ್ಲ ಅವು ನಡೆ ಪ್ರಮಾಣುವಿನ ದನಿ ರೂಪಗಳು ಎಂಬುದನ್ನು ತಳವರ್ಗದ ಶಿವಶರಣರ ವಚನಗಳು ಸಾಕ್ಷೀಕರಿಸುತ್ತವೆ. ವಚನ ಯುಗವು ಸ್ತ್ರೀ ಸಮಾನತೆಯನ್ನು ಹೊಂದಿದೆ ಎನ್ನುವುದಕ್ಕೆ ಅನುಭವ ಮಂಟಪದಲ್ಲಿ ಮಹಿಳೆ ಪಡೆದ ಪ್ರವೇಶವೇ ಕಾರಣ. ಅಲ್ಲದೆ ಸಮಾಜವು ತಿರಸ್ಕೃತವಾಗಿ ಕಾಣುವ ಸೂಳೆಯೂ ಇಲ್ಲಿ ಸ್ಥಾನ ಪಡೆದಿದ್ದಳೆಂಬುದಕ್ಕೆ ಸೂಳೆಸಂಕವ್ವೆಯ ಸಾಕ್ಷಿ ಗಮನಾರ್ಹವಾದುದು. ಹೆಣ್ಣನ್ನು ಮಾಯೆ, ರಕ್ಕಿಸಿ ಎಂದು ಬಿಂಬಿಸುವ ಸಂದರ್ಭವನ್ನು ಒಡೆದು ಹಾಕಿ .....

ಹೆಣ್ಣು ಹೆಣ್ಣಲ್ಲ, ಹೆಣ್ಣು ರಕ್ಕಸಿಯಲ್ಲ
ಹೆಣ್ಣು ಸಾಕ್ಷಾತ್ ಕಪಿಲಸಿದ್ದ ಮಲ್ಲಿಕಾಜರ್ುನ ಎಂದು ಸಾರಿದರು.

ಪರಂಪರಾಗತವಾಗಿ ಬಂದ ಸಂಪ್ರದಾಯದಂತೆ ಹೆಣ್ಣನ್ನು 'ನ ಸ್ತ್ರೀ ಸ್ವಾತಂತ್ರ್ಯ ಅರ್ಹತೆ' ಎಂದು ಹೇಳುವ ಮೂಲಕ ಅವಳ ಅಸ್ತಿತ್ವಕ್ಕೆ ಕೊಡಲಿ ಪೆಟ್ಟು ಹಾಕಿದ್ದನ್ನು ಖಂಡಿಸಿ ಜಗತ್ತು ನಿತ್ಯ ಸತ್ಯವಾದದ್ದು ಮುಕ್ತಿಗೆ ಸ್ತ್ರೀ ಪುರುಷನೆಂಬ ಅಭಿಮಾನ ತಾರತಮ್ಯ ಸಲ್ಲದು ಎಂದು ಹೇಳಿದ್ದನ್ನು ......

ಪುರುಷನ ಮುಂದೆ ಮಾಯ
ಸ್ತ್ರೀ ಯಂಬ ಅಭಿಮಾನವಾಗಿ ಕಾಡುವುದು
ಸ್ತ್ರೀಯ ಮುಂದೆ ಮಾಯ

ಪುರುಷನೆಂಬ ಅಭಿಮಾನವಾಗಿ ಕಾಡುವುದು, ಎಂದು ಹೇಳುವುದರ ಮೂಲಕ ಸಾಮಾಜಿಕ ಬದಲಾವಣೆಗಳಲ್ಲಿ ಮಹಿಳೆ ಸಮಾನ ಅವಕಾಶವುಳ್ಳವಳು ಎಂಬುದನ್ನು ಸೂಚಿಸಿದರು. ಇದರ ಫಲವಾಗಿಯೇ ಎಂಬಂತೆ ಅನೇಕ ವಚನಗಾತರ್ಿಯರು ಪುರುಷ ಸಮಾನ ಅವಕಾಶವನ್ನು ಮಂಟಪದಲ್ಲಿ ಪಡೆದರು. ಶರಣರಿಗಿಂತ ಬಹುಪಾಲೌ ಶರಣೆಯರು ತಮ್ಮ ವೈಚಾರಿಕತೆಯ ಪ್ರಬುದ್ಧತೆಯನ್ನು ಪ್ರದಶರ್ಿಸಿದ್ದಾರೆ. ಆ ಕಾರಣಕ್ಕಾಗಿಯೇ ಚನ್ನಬಸವಣ್ಣನವರು 'ನಿಜಪದದ ನೈದಿದ ಮಹಾದೇವಿ ಅಕ್ಕನ ಶ್ರೀಪಾದಕ್ಕೆ ನಮೋ ನಮೋ ಎಂಬೆನು' ಎಂದು ವಂದಿಸಿದ್ದಾರೆ.

ದೌರ್ಬಲ್ಯ ಎನ್ನುವುದು ಬರೀ ಹೆಣ್ಣಿಗಿಲಗಿಲ್ಲ ಗಂಡಿಗೂ ಇದೆ ಆದರೆ ದೌರ್ಬಲ್ಯದ ಭಾರ ಹೆಣ್ಣಿಗೆ ಮಾತ್ರ ಸಲ್ಲದು ಎಂಬುದಕ್ಕೆ ಸಿದ್ಧಾರಾಮ ಈ ವಚನ ಸಾಕ್ಷಿ ......

ತಾ ಮಾಡಿದ ಹೆಣ್ಣು ತನ್ನ ತಲೆಯನ್ನೇರಿತ್ತು
ತಾ ಮಾಡಿದ ಹೆಣ್ಣು ತನ್ನ ತೊಡೆಯನ್ನೇರಿತ್ತು
ತಾ ಮಾಡಿದ ಹೆಣ್ಣು ನಾರಾಯಣನ ಎದೆಯನ್ನೇರಿತ್ತು.

ಎಂದು ಹೇಳಿ ಹೆಣ್ಣಿಗೆ ದೇವತೆಯ ಸ್ಥಾನ ನೀಡಿದ್ದಾರೆ. ಶರಣು ಕುರುಹನ್ನು ಬಿಟ್ಟು ಅರಿವನ್ನು ಗುರುತಿಸಿದರು. ಶರಣಸತಿ ಲಿಂಗಪತಿ ಭಾವ ಬಹಳ ಮುಖ್ಯವಾದುದು. ಶರೀರ ಸತಿ ಮನಸ್ಸು ಪತಿ, ಮನವೇ ಮಹಾಲಿಂಗ ಅಂಗ ಲಿಂಗ ಸಮರಸಗೊಳಿಸಬೇಕು. ಶರಣ ಧರ್ಮದಲ್ಲಿ ಸಂಸಾರ ತ್ಯಾಜ್ಯವಲ್ಲ. ಸತಿ ಪತಿಗಳೊಂದಾದ ಭಕ್ತಿ ಹಿತವಾಗಿ ಒಪ್ಪುವುದು ಶಿವನಿಗೆ. ದಾಂಪತ್ಯ ಜೀವನ ಸತ್ಯ ಶುದ್ಧವಾಗಿರಬೇಕು. ದಂಪತಿಗಳಲ್ಲಿ ಏಕಭಾವ ಇರಬೇಕು ಇಲ್ಲದಿದ್ದರೆ ವಿಷಮ ದಾಂಪತ್ಯ ಅಮೃತದಲ್ಲಿ ವಿಷ ಬೆರಿಸಿದಂತೆ ಎಂದು ಹೇಳಿದರು.

ಗಂಡ ಶಿವಲಿಂಗ ದೇವರ ಭಕ್ತ, ಹೆಂಡತಿ ಮಾರಿಮಸಣಿಯ ಭಕ್ತೆ
ಗಂಡ ಕೊಂಬುದು ಪಾದೋದಕ ಪ್ರಸಾದ
ಹೆಂಡತಿ ಕೊಂಬುದು ಸುರೆ ಮಾಂಸ
ಹೆಂಡದ ಮಡಿಕೆಯ ಹೊರಗೆ ತೊಳೆದಂತೆ.

ಮಡಿಕೆಯ ಅಂತರಂಗ ಬಹಿರಂಗದಂತೆ ಸತಿಪತಿಯರು ಶುದ್ಧವಾಗಿರಬೇಕು ಇಲ್ಲದಿದ್ದರೆ ದಾಂಪತ್ಯ ಹೆಂಡದ ಮಡಿಕೆಯನ್ನು ಹೊರಗೆ ತೊಳೆದಂತೆ ವ್ಯರ್ಥವೆನಿಸುತ್ತದೆ. ವಿಚಾರ ಹಾಗೂ ಆಚಾರ ಭಿನ್ನತೆಗಳು ಕುಟುಂಬದ ಸೌಖ್ಯವನ್ನು ಹಾಳು ಮಾಡುತ್ತದೆ.

ಭಾರತೀಯ ಧರ್ಮಗಳಲ್ಲಿ ದೇವನಾಗುವ ಅವಕಾಶ ಪುರುಷನಿಗೆ ಮಾತ್ರ ಸೀಮಿತವಾಗಿದೆ. ಸ್ತ್ರೀ ಸಮಾಜ ಮಟ್ಟದಲ್ಲಿಯೇ ಉಳಿಯದಂತೆ ಕೆಲವೊಂದು ಪ್ರತಿಕೂಲ ತತ್ವಗಲನ್ನು ಸೃಷ್ಟಿಸಿದವು. ಇಲ್ಲಿ ಮಹಿಳೆ ತನ್ನ ಆತ್ಮೋದ್ಧಾರದ ಹಂಬಲವನ್ನು ಬಿಡುವಂತೆ ಮಾಡಿದವು. ಆದರೆ ಶರಣರು ಕರುಹನ್ನು ಮರೆತು ಅರಿವನ್ನು ಗುರುತಿಸಿದರು. ಹೆಣ್ಣನ್ನು ಹೆಣ್ಣಾಗಿ ಕಾಣದೆ ಅವಳಲ್ಲಿನ ಚೈತನ್ಯ ಸ್ವರೂಪವನ್ನು ಗುರುತಿಸಿದರು. ಹೀಗೆ ಶರಣರ ಚಳುವಳಿಯು ಸ್ತ್ರೀಯರ ಬದುಕಿಗೆ ಹೊಸ ಆಯಾಮವನ್ನು ತಂದುಕೊಟ್ಟಿತು. ಶರಣರು ಸ್ತ್ರೀ ಪರವಾಗಿ ಕಲ್ಪಿಸಿದ ನೆಲೆಗಳು ಅತ್ಯಂತ ಪರಿಣಾಮಕಾರಕ ಮತ್ತು ಕ್ರಾಂತಿಕಾರಕವಾಗಿದ್ದವು.

## ಪರಾಮರ್ಶನಗಳು:-


1. ಶಿವಶರಣೆಯರ ವಚನ ಸಂಪುಟ. ಡಾ. ವೀರಣ್ಣ ರಾಜೂರ
2. ಕನ್ನಡ ಸಾಹಿತ್ಯ ಚರಿತ್ರೆ. ರಂ.ಶ್ರೀ. ಮುಗಳಿ
3. ಸಂಚಲನ. ಡಾ. ಗಾಯತ್ರಿ
4. ಮಹಿಳೆ ಮತ್ತು ಮೌಢ್ಯ. ಡಾ. ವಸುಂಧರಾ ಭೂಪತಿ